ಅಸಲು ದಾವಾ ನಂಬರ 242/2021
ಪಿಡಬ್ಲ್ಯೂ 1

ಸಾಕ್ಷಿಯನ್ನು ಇಂದು ದಿನಾಂಕ:16-04-2024 ರಂದು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.

<u>ಪಾಟೀ ಸವಾಲು ಶ್ರೀ ಎಸ್ ಎ ಜಿ ವಕೀಲರಿಂದ</u>

1. ಈ ದಾವೆ ದಾಖಲಿಸುವ ಪೂರ್ವದಲ್ಲಿ ಮತ್ತೊಂದು ದಾವೆಯನ್ನು ನಾನು ಗೌರವಾನ್ವಿತ ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯದಲ್ಲಿ ದಾಖಲಿಸಿದ್ದೆ ಎಂದರೆ ನಿಜ. ಅಸಲು ದಾವಾ ನಂಬರ 69/2017 ಅಂತಾ ಇತ್ತು ಎಂದರೆ ನಿಜ. ಆ ದಾವೆಯಲ್ಲಿ ನನ್ನ ತಂಗಿ ಮತ್ತು ಈ ದಾವೆಯ ಪ್ರತಿವಾದಿ 1 ರಿಂದ 3 ರವರು ತಕರಾರು ಸಲ್ಲಿಸಿದ್ದರು ಎಂದರೆ ನಿಜ. ದಿನಾಂಕ 19-01-2021 ರಂದು ದಾವೆ ವಜಾಗೊಂಡಿದೆ ಎಂದರೆ ನಿಜ.

2. ದಾವಾ ಜಮೀನು ಮೂಲತಹ ನನ್ನ ಅಜ್ಜ ಅಜ್ಜಿಯ ಆಸ್ತಿ. ದಾವಾ ಆಸ್ತಿ ಮೂಲತಹ ಜಾಯಪ್ಪ ರಾಮಪ್ಪ ಹರನಾಳ ಇವರಿಗೆ ಸಂಬಂಧಿಸಿದ್ದು ಎಂದರೆ ಸರಿಯಲ್ಲ. ನನ್ನ ಅಜ್ಜ ಖರೀದಿ ಮಾಡಿದ ಆಸ್ತಿ ಎಂದು ಹೇಳುತ್ತಾರೆ. ದಾವಾ ಆಸ್ತಿ ಛಾಯಪ್ಪ ರಾಮಪ್ಪ ಹರನಾಳ ಇವರ ಕಡೆಯಿಂದ ಅಡಿವೆಪ್ಪ ನಿಂಗಪ್ಪ ಬಂದಾಳ ಇವರು ಖರೀದಿ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಬಿಯಾಮಾ ಗಂಡ ರಾಜೇಸಾಬ ಹವಾಲ್ದಾರ ನನ್ನ ಅಜ್ಜಿ ಅಂದರೆ ನನ್ನ ತಂದೆಯ ತಾಯಿ. ಬಿಯಾಮಾ 1938 ರಲ್ಲಿ ದಾವಾ ಜಮೀನು ಖರೀದಿ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಡ ನಂಬರ 597 ಅಂತಾ ಮಂಜೂರಾಗಿದೆ ಎಂದರೆ ನನಗೆ ಗೊತ್ತಿಲ್ಲ. ಬಿಯಾಮಾ ಇವಳಿಗೆ ಮಕ್ಕಳು ಜನಿಸಿರಲಿಲ್ಲ ಎಂದರೆ ನಿಜ. ಸಾಕ್ಷಿ ಮುಂದುವರೆದು ನನ್ನ ತಂದೆಯನ್ನು ದತ್ತಕ ಪಡೆದುಕೊಂಡಿರುತ್ತಾರೆ ಎಂದು ಹೇಳುತ್ತಾರೆ.

3. ಬಿಯಾಮಾ ಇವರಿಗೆ ನಬಿಸಾಬ ಮತ್ತು ಅಬುಸಾಬ ಇವರು ಮೈದುನನ ಮಕ್ಕಳು ಎಂದರೆ ನಿಜ. ಬಿಯಾಮಾ ಜೀವಂತ ಇದ್ದಾಗ ದಾವಾ ಜಮೀನನ್ನು ನಬಿಸಾಬ ಮತ್ತು ಅಬುಸಾ ಇವರಿಗೆ ಹೋಗಬೇಕೆಂದು ಮೃತ್ಯು ಪತ್ರ ಬರೆದಿದ್ದಳು ಎಂದರೆ ನಿಜ. ಆ ಪ್ರಕಾರ ಡ ನಂಬರ 3189 ಮಂಜೂರಾಗಿದೆ ಎಂದರೆ ನಿಜ. ಬಿಯಾಮಾ ಮೃತಪಟ್ಟ ನಂತರ ಮೃತ್ಯು ಪತ್ರದ ಪ್ರಕಾರ ಅಬುಸಾಬ ಸರ್ವೆ ನಂಬರ

61,62 ಮತ್ತು 63 ಹೋಗಿದೆ ಎಂದರೆ ನಿಜ. ಅದೇ ರೀತಿ ನಬಿಸಾಬ ಇವರಿಗೆ ಸರ್ವೇ ನಂಬರ 148/1 ಆಸ್ತಿ ಹೋಗಿದೆ ಎಂದರೆ ನಿಜ. ಆ ಪ್ರಕಾರ ಡ ನಂಬರ 3656 ಮಂಜೂರಾಗಿದೆ ಎಂದರೆ ನಿಜ. ದಾವಾ ಜಮೀನು ನಬಿಸಾಬನ ಸ್ವಂತ ಆಸ್ತಿ ಎಂದರೆ ನಿಜ. ನಬಿಸಾಬ ಜೀವಂತ ಇದ್ದಾಗ ತನ್ನ ಆಸ್ತಿಯನ್ನು ಮಗನಿಗೆ ಬಿಟ್ಟುಕೊಡುತ್ತೇನೆ ಎಂದು ಹೇಳುತ್ತಿದ್ದ ಎಂದರೆ ನನಗೆ ಗೊತ್ತಿಲ್ಲ.

4. 2004-05 ರಲ್ಲಿ ನನ್ನ ತಂದೆ ನಬಿಸಾಬ ದಾವಾ ಜಮೀನನ್ನು ತನ್ನ ಮಗನಾದ ಪ್ರತಿವಾದಿ 1 ಇತನಿಗೆ ಬಿಟ್ಟು ಕೊಟ್ಟಿರುತ್ತಾನೆ ಎಂದರೆ ನನಗೆ ಗೊತ್ತಿಲ್ಲ. 2004 ರಿಂದ ಇಲ್ಲಿಯವರೆಗೆ ರಾಜೇಸಾಬನ ಹೆಸರಿನಲ್ಲಿ ಪಹಣಿ ಪತ್ರಿಕೆ ಇದ್ದು ಆತನೇ ಸ್ವಾಧಿನದಲ್ಲಿದ್ದಾನೆ ಎಂದರೆ ನಿಜ.

**ಮುಂದುವರೆದ ಪಾಟೀ ಸವಾಲು ಮಾಡಲು ಕಾಲಾವಕಾಶ ಕೋರಿದ್ದರಿಂದ ಕಾಲಾವಕಾಶ ನೀಡಲಾಯಿತು.**

(ಸಾಕ್ಷಿಯ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸರಿ ಅದೆ.

ಸಿವಿಲ್ ಜಡ್ಜ ಮತ್ತು ಜೆ.ಎಂ.ಎಫ್.ಸಿ.,
ಸಿಂದಗಿ